ಉಳಿದುಕೊಂಡಿರಬೇಕೆಂದು ಅವರು ಭಾವಿಸಿಕೊಂಡಿರಬಹುದು. ಆದರೆ, ಇವತ್ತು ಸಂಜೆಯೊಳಗಂತೂ ಅವರಿಗೆ ಖಂಡಿತವಾಗಿಯೂ ಗೊತ್ತಾಗುತ್ತದೆ.

ಇಷ್ಟರಲ್ಲಿ ಹೊರಗಿಂದ ಭಯಾನಕ ರಣಕೇಕೆ ನಮ್ಮ ಕಿವಿಗಳಿಗಪ್ಪಳಿಸಿತು. ಬೈಬಲಿನ ಪುಟ್ಟ ಬಾಲಕ ದಾವಿದ, ಗೋಲಿಯಾತನೆಂಬ ಭಯಂಕರ ರಕ್ಕಸನನ್ನು ಕವಣೆಯಿಂದ ಹೊಡೆದು ಬೀಳಿಸಿದಾಗ ಕಿರುಚಿಕೊಂಡಂತೆ! ನಾವು ಹೊರಗೆ ಓಡಿದೆವು. ಹುಡುಗ ಕವಣೆಯನ್ನು ತಲೆಯ ಮೇಲೆ ಗಿರಗಿರನೆ ತಿರುಗಿಸುತ್ತಾ ತಾನೂ ಬುಗರಿಯಂತೆ ತಿರುಗುತ್ತಿದ್ದ. ನಾನು ತಕ್ಷಣ ಬಗ್ಗಿದೆ. ಆದರೆ ಬಿಲ್ಲ್!... ಹುಡುಗನ ಕವಣೆಯಿಂದ ಹೊರಟ ಮೊಟ್ಟೆಯಷ್ಟು ದೊಡ್ಡ ಕಲ್ಲು ರಪ್ಪನೆ ಸಿಡಿದು ಬಂದು ಬಿಲ್ಲನ ಕೆನ್ನೆಗೆ ಅಪ್ಪಳಿಸಿ, ಬಿಲ್ಲ್, ಮರದಲ್ಲೇ ಮಾಗಿದ ಹಲಸಿನ ಹಣ್ಣಿನಂತೆ ದೊಪ್ಪನೆ ನೆಲಕ್ಕುರುಳಿದ! ಅವನನ್ನು ಎದ್ದು ಕುಳ್ಳಿರಿಸಿ ತಣ್ಣನೆ ನೀರನ್ನು ಅವನ ಮುಖದ ಮೇಲೆ ಎರಚಿದೆ.

## 6

ಕೆಲವು ಗಳಿಗೆಗಳ ನಂತರ ಬಿಲ್ಲ್ ಎಚ್ಚರವಾಗಿ ನನ್ನನ್ನೇ ನೋಡತೊಡಗಿದ. ನಂತರ,

'ಸ್ಯಾಮ್, ಪವಿತ್ರ ಬೈಬಲಿನಲ್ಲಿ ಬರುವ ಪಾತ್ರಧಾರಿಗಳಲ್ಲಿ ನನಗೆ ತುಂಬಾ ಅಚ್ಚುಮೆಚ್ಚಿನ ಪಾತ್ರಧಾರಿ ಯಾರು ಗೊತ್ತೇ?' ಎಂದ ಗೊಗ್ಗರು ದನಿಯಲ್ಲಿ.

'ಬಿಲ್ಲ್, ಸಮಧಾನ! ಉದ್ವೇಗಗೊಳ್ಳಬೇಡ!' ನಾನೆಂದೆ.

'ಹೆರೋದ್ ರಾಜ!' ಕಿವಿಯ ಹಿಂಭಾಗವನ್ನು ನೇವರಿಸುತ್ತಾ ಬಿಲ್ಲ್ ಬಿಕ್ಕಳಿಸಿದ. 'ಆ ಹುಡುಗನೊಟ್ಟಿಗೆ ನನಗೆ ಒಬ್ಬನೇ ಬಿಟ್ಟು ಹೋಗಬೇಡ ಸ್ಯಾಮ್... ನನಗೆ ಹೆದರಿಕೆಯಾಗುತ್ತದೆ.' ಗೋಗರೆಯುವ ದನಿಯಲ್ಲಿ ಅವನು ಹೇಳುತ್ತಿದ್ದ.

ನಾನು ಹುಡುಗನ ಬಳಿ ಹೋದೆ. ಅವನ ಶರ್ಟಿನ ಕಾಲರನ್ನು ಹಿಡಿದು ಒಮ್ಮೆ ಮೇಲೆತ್ತಿ ಚೆನ್ನಾಗಿ ಕೊಡವಿದೆ. 'ನಿನ್ನ ತುಂಟಾಟ ಇದೇ ತರ ಮುಂದುವರಿದರೆ ಖಂಡಿತ ನಿನ್ನನ್ನು ಬಿಟ್ಟು ಬರುತ್ತೇನೆ!' ಗಂಭೀರವಾಗಿ ನಾನು ಅವನನ್ನು ಎಚ್ಚರಿಸಿದೆ.

'ನಾನು ನಿಜವಾಗಿಯೂ ತಮಾಷೆಗಾಗಿ ಮಾಡಿದ್ದು ಸ್ನೇಕ್—ಐ!' ಹುಡುಗ ಮುಖ ಬಾಡಿಸಿಕೊಂಡು ಹೇಳಿದ. ಆ ಗಳಿಗೆ ಅವನು ನನಗೆ ತುಂಬಾ ಮುಗ್ಧನಾಗಿ ಕಂಡ.

'ಅದೆಲ್ಲಾ ನನಗೆ ಗೊತ್ತಿಲ್ಲ. ಹೋಗಿ ಬಿಲ್ಲ್‌ನಿಗೆ ಸಾರಿ ಎಂದು ಹೇಳು. ಇಲ್ಲದಿದ್ದರೆ ನಿನ್ನನ್ನು ಸಂಜೆ ಮನೆಗೆ ಬಿಟ್ಟು ಬರುತ್ತೇನೆ!' ನಾನೆಂದೆ. ಅವನನ್ನು ಬಿಲ್ಲ್‌ನ ಕೈ ಕುಲುಕುವಂತೆ ಮಾಡಲು ನಾನು ಯಶಸ್ವಿಯಾದೆ. ನಂತರ ಬಿಲ್ಲ್‌ನನ್ನು ಕರೆದು ನಾನು ಹುಡುಗನ ಪಕ್ಕದೂರು ಪೊಪ್ಲಾರ್ ಕೋವ್‌ಗೆ ಹೋಗಿ ಸಮ್ಮಿಟಿನ ಕತೆ ಏನೆಂದು ತಿಳಿದು ಬರುತ್ತೇನೆ, ಹಾಗೆಯೇ ಹುಡುಗನ ತಂದೆ ಡೊರ್ಸೆಟನಿಗೆ ಒತ್ತೆ ಹಣದ ಬಗ್ಗೆ ಪತ್ರ ಬರೆಯುವ ವಿಚಾರವಾಗಿ ತಿಳಿದು ಬರುವುದಾಗಿ ಹೇಳಿದೆ.

ಬಿಲ್ಲ್ ನನ್ನ ಕೈಗಳನ್ನು ಬಲವಾಗಿ ಹಿಡಿದ. ಅವನ ಕಣ್ಣುಗಳಲ್ಲಿ ಗಾಬರಿ ಕಾಣಿಸುತ್ತಿತ್ತು. 'ಸ್ಯಾಮ್, ಮಳೆ, ನೆರೆ, ಬಿಸಿಲು, ಚಳಿ, ಬಿರುಗಾಳಿ ಎಲ್ಲವನ್ನೂ ಕಡೆಗಣಿಸಿ ನಿನ್ನೊಟ್ಟಿಗೆ ಇದ್ದೇನೆ. ಯಾವುದೇ ವಿಷಮ ಗಳಿಗೆಯಲ್ಲೂ ಹೆದರಿದ ಅಸಾಮಿಯಲ್ಲ. ಇಂದು ಯಾಕೋ ಈ ಚೋಟುದ್ದ ಮೆಣಸು ನನಗೆ ಹೆದರಿಕೆ ಹುಟ್ಟಿಸುತ್ತಿದೆ! ನಿನಗೆ ತುಂಬಾ ಹೊತ್ತು ಹಿಡಿಯುವುದಿಲ್ಲ ತಾನೆ?'

'ನಾನು ಮಧ್ಯಾಹ್ನದೊಳಗೆ ವಾಪಸ್ಸಾಗುತ್ತೇನೆ ಬಿಲ್ಲ್. ಬಂದಂತೆ ಡೊರ್ಸೆಟನಿಗೆ ಪತ್ರ ಬರೆದು ಹಾಕುವ. ಅಲ್ಲಿವರೆಗೆ ಹೇಗಾದರೂ ಹುಡುಗನನ್ನು ಸಂಭಾಳಿಸು.'